5) ಬಿಜಾಪುರ ಜಿಲ್ಲೆಯಲ್ಲಿ ಸದ್ಯಕ್ಕೆ ಯಾರು ದಳಪತಿಗಳೆಂದು ಕೆಲಸ ನಿರ್ವಹಿಸುತ್ತಿರುವುದಿಲ್ಲ. ಈ ಹಿಂದೆ 567 ಜನ ದಳಪತಿಗಳೆಂದು ಕೆಲಸ ನಿರ್ವಹಿಸುತ್ತಿದ್ದರು, ತಾಲ್ಲೂಕಾವಾರು ವಿವರಗಳು ಈ ಕೆಳಗಿನಂತಿದೆ.

ತಾಲ್ಲೂಕಗಳು	ದಳಪತಿಗಳ ಸಂಖ್ಯೆ
1) ಬಿಜಾಪುರ ತಾಲ್ಲೂಕು	99
2) ಇಂಡಿ ತಾಲ್ಲೂಕು	109
3) ಸಿಂದಗಿ ತಾಲ್ಲೂಕು	125
4) ಬಸವನ ಬಾಗೇವಾಡಿ ತಾಲ್ಲೂಕು	103
5) ಮುದ್ದೇಬಿಹಾಳ ತಾಲ್ಲೂಕು	131

6) 129

1980 (2481) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ):– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ, ಕೆ.ಪಿ.ಟಿ.ಸಿ.ಎಲ್.ಗಳಲ್ಲಿ ಲೈನ್‌ಮನ್ ಹುದ್ದೆಗಳಿಗೆ ನೇಮಕಗೊಳ್ಳಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಇರಬೇಕಾದ ಅರ್ಹತೆಗಳೇನು;

ಆ) ಯಾವ ನೇಮಕಾತಿ ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು ಪುರಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಲೈನ್‌ಮನ್ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ;

ಇ) ರಾಜ್ಯದಲ್ಲಿ ಮಹಿಳೆಯರನ್ನು ಲೈನ್‌ಮನ್ ಹುದ್ದೆಗಳಿಗೆ ಯಾವ ವರ್ಷದಿಂದ ನೇಮಕ ಮಾಡಿಕೊಳ್ಳಲು ಆರಂಭಿಸಲಾಯಿತು;

ಈ) ಈವರೆಗೆ ಎಷ್ಟು ಜನ ಮಹಿಳೆಯರನ್ನು ನೇಮಕ ಮಾಡಿಕೊಳ್ಳಲಾಗಿದೆ;

ಉ) ಮಹಿಳಾ ಲೈನ್‌ಮನ್‌ಗಳು ಹಳ್ಳಿಗಳಿಗೆ ಹೋಗಿ ಕೆಲಸ ನಿರ್ವಹಿಸಲು ಸಮರ್ಥರಿದ್ದಾರೆಯೇ;

ಊ) ಅವರ ಸೇವೆ ತೃಪ್ತಿಕರವೆಂದು ಸರ್ಕಾರಕ್ಕೆ ಅಥವಾ ಇಲಾಖೆಗೆ ಕಂಡು ಬಂದಿದೆಯೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):–

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸಹಾಯಕ ಮಾರ್ಗದಾಳು ಹುದ್ದೆಗಳನ್ನು ನೇರ ನೇಮಕಾತಿಯಲ್ಲಿ ಭರ್ತಿ

ಮಾಡಲಾಗಿದ್ದು, ನೇಮಕಾತಿಗಾಗಿ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಈ ಕೆಳಗಿನ ಅರ್ಹತೆಯನ್ನು ನಿಗದಿಪಡಿಸಲಾಗಿರುತ್ತದೆ.

1) ಕರ್ನಾಟಕ ಸರ್ಕಾರದಿಂದ ಮನ್ನಣೆಯಾದ ಔದ್ಯೋಗಿಕ ತರಬೇತಿ ಸಂಸ್ಥೆ / ಕೇಂದ್ರದಿಂದ "ಎಲೆಕ್ಟ್ರಿಷಿಯನ್, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಾನಿಕ್ ಮೆಕ್ಯಾನಿಕ್" ವೃತ್ತಿಯಲ್ಲಿ 18/ 24 ತಿಂಗಳಿನ ಪಠ್ಯಕ್ರಮದಲ್ಲಿ ಶೇ. 60 ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವ ಐಟಿಐ ಪ್ರಮಾಣ ಪತ್ರ ಹೊಂದಿರತಕ್ಕದ್ದು ಹಾಗೂ ನಿಗಮದಿಂದ ನಡೆಸಲಾಗುವ ಸಹನಾ ಶಕ್ತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು.

2) ಕನ್ನಡದಲ್ಲಿ ಓದುವ ಮತ್ತು ಬರೆಯುವ ಜ್ಞಾನ ಹೊಂದಿರಬೇಕು.

3) ತೃಪ್ತಿಕರ ನೇತ್ರ ದೃಷ್ಟಿಯನ್ನು ಹೊಂದಿರಬೇಕು.

4) ತೃಪ್ತಿಕರ ದೇಹ ದಾರ್ಢ್ಯವನ್ನು ಹೊಂದಿರಬೇಕು ಮತ್ತು ಸಹನಾ ಶಕ್ತಿಯ ಪರೀಕ್ಷೆಯಲ್ಲಿ ಅರ್ಹತೆಗಳಿಸಬೇಕು.

ಆ) ಸಹಾಯಕ ಮಾರ್ಗದಾಳು ಹುದ್ದೆಗಳ ನೇರ ನೇಮಕಾತಿಯಲ್ಲಿ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಬ್ಬರಿಗೂ ಮೇಲಿನ ಅ) ನಲ್ಲಿ ತಿಳಿಸಿರುವ ಅರ್ಹತೆಯನ್ನು ನಿಗದಿಪಡಿಸಲಾಗಿರುತ್ತದೆ. ಆಯ್ಕೆಯನ್ನು ಅರ್ಹತಾದಾಯಕ ವಿಷಯದಲ್ಲಿ ಗಳಿಸಿರುವ ಅಂಕ ಮತ್ತು ಸಹನ ಶಕ್ತಿಯ ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಅನುಪಾತ 75:25 ಆಧಾರದ ಮೇಲೆ ರೋಸ್ಟರ್ ಅನ್ನು ಪಾಲಿಸಿ ಪೂರ್ಣವಾಗಿ ಯೋಗ್ಯತೆಯ ಆಧಾರದಲ್ಲಿ ಮಾಡಲಾಗಿದೆ. ಸಹನ ಶಕ್ತಿಯ ಪರೀಕ್ಷೆಗೆ ವಿವಿಧ ಜಾತಿ/ವರ್ಗ/ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳನ್ನು ಅರ್ಹತೆ ಆಧಾರದ ಮೇಲೆ 1:10 ರ ಅನುಪಾತದಲ್ಲಿ ಕರೆಯಲಾಗಿರುತ್ತದೆ.

ಸಹನಾ ಶಕ್ತಿ ಪರೀಕ್ಷೆಯನ್ನು ಈ ಕೆಳಗಿನಂತೆ ನಡೆಸಲಾಗಿದೆ.

<u>ಪುರುಷ ಅಭ್ಯರ್ಥಿಗಳಿಗೆ:</u>

1) 100 ಮೀಟರ್ ಓಟ – ಒಂದು ಬಾರಿ (14 ಸೆಕೆಂಡುಗಳು)

2) ಶಾಟ್‌ಪುಟ್ 12 ಪೌಂಡುಗಳು –8 ಮೀಟರ್ ಎಸೆತ (3 ಅವಕಾಶಗಳು)

3) ಸ್ಕಿಪ್ಪಿಂಗ್ – ಒಂದು ನಿಮಿಷದಲ್ಲಿ 50 ಬಾರಿ

4) 800 ಮೀಟರ್ ಓಟ – ಒಂದು ಬಾರಿ (3 ನಿಮಿಷಗಳು)

5) ವಿದ್ಯುತ್ ಕಂಬ ಹತ್ತುವುದು – 8 ಮೀಟರ್ ಎತ್ತರ

<u>ಮಹಿಳಾ ಅಭ್ಯರ್ಥಿಗಳಿಗೆ :</u>

1) 100 ಮೀಟರ್ ಓಟ – ಒಂದು ಬಾರಿ 16 (ಸೆಕೆಂಡುಗಳು)

2) ಶಾಟ್‌ಪುಟ್ 8 ಪೌಂಡುಗಳು – 5 ಮೀಟರ್ ಎಸೆತ (3 ಅವಕಾಶಗಳು)

3) ಸ್ಕಿಪ್ಪಿಂಗ್ – ಒಂದು ನಿಮಿಷದಲ್ಲಿ 50 ಬಾರಿ

4) 800 ಮೀಟರ್ ಓಟ – ಒಂದು ಬಾರಿ (4 ನಿಮಿಷಗಳು)

5) ಸಿಟ್ ಅಪ್ಸ್ (ಬೈಟಕ್) – 20 ಬಾರಿ, 30 ಸೆಕೆಂಡುಗಳಲ್ಲಿ

ಇ) ರಾಜ್ಯದಲ್ಲಿ ಮಹಿಳೆಯರನ್ನು ಲೈನ್‌ಮನ್ ಹುದ್ದೆಗಳಿಗೆ 1998 ನೇ ವರ್ಷದಿಂದ ನೇಮಕ ಮಾಡಿಕೊಳ್ಳಲಾಗಿದೆ.

ಈ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿವಿಧ ವಿದ್ಯುತ್ ಸರಬ್ಬರಾಜು ಕಂಪನಿಗಳಲ್ಲಿ ಇದುವರೆವಿಗೂ ಒಟ್ಟು 1348 ಮಹಿಳೆಯರನ್ನು ಸಹಾಯಕ ಮಾರ್ಗದಾಳು ಹುದ್ದೆಗಳಿಗೆ ನೇಮಕಮಾಡಿಕೊಳ್ಳಲಾಗಿದೆ.

ಉ) ಹೌದು

ಊ) ಹೌದು

1981 (2187) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು):– ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒ.ಪಿ. ಆಟಕ್ಕೆ (ಮಟ್ಕಾ) ಯಾವುದೇ ತೊಂದರೆ ಇಲ್ಲದೇ ನಡೆಯುತ್ತಿರುವುದು ನಿಜವೇ;

ಆ) ಇದು ಯಾವ ಯಾವ ತಾಲ್ಲೂಕುಗಳಲ್ಲಿ ನಡೆಯುತ್ತಿದೆ;

ಇ) ಈ ಆಟವನ್ನು ನಿಲ್ಲಿಸಲು ಸರ್ಕಾರ ಅಸಮರ್ಥವಿದೆಯೇ;

ಈ) ನಿಲ್ಲಿಸಲು ಸಮರ್ಥವಾಗಿದ್ದರೆ ಇಲ್ಲಿಯವರೆಗೆ ನಿಲ್ಲಿಸದಿರಲು ಕಾರಣಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು:

ಅ) ಇಲ್ಲ